Mr. SPEAKER:—I would like to discuss this matter in greater detail.

Sri H. V. KOUJALGI.—May I take it that the question hour is over, Sir ?

Mr. SPEAKER.—I have already announced that the question hour is over.

Presence of Police Personnel in the Visitor's Gallery of L.A. Chambers

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸ್ವಾಮಿ, ಈ ಸಭೆಯ ವಿಸಿಟರ್ಸ್ ಗ್ಯಾಲರಿಯಲ್ಲಿ ಪೋಲೀಸ್ ಇಲಾಖೆಯ ಸ್ಪೆಷಲ್ ಬ್ರಾಂಚ್‌ನ ನಾಲ್ಕು ಪೋಲೀಸು ಅಧಿಕಾರಿಗಳು ಮಫ್ತಿಯಲ್ಲಿ ಬಂದು ಕುಳಿತಿದ್ದಾರೆ. ತಾವು ಬೇಕಾದರೆ ಇಲ್ಲಿ ನೋಡಬಹುದು (ಅವರ ಕಡೆಗೆ ಕೈ ತೋರಿಸಿದರು). ಇದರಲ್ಲಿ ಇಬ್ಬರು ಎದ್ದು ಹೋಗುತ್ತಿದ್ದಾರೆ. ತಾವು ನೋಡಬಹುದು. ಇವರು ಮಫ್ತಿಯಲ್ಲಿ ಬಂದಿದ್ದಾರೆ.

Mr. SPEAKER.—I shall find out if there are police in mufti or in uniform. If there are any police officers, let them retire from the gallery.

ಶ್ರೀ ವಾಟಾಳ್ ನಾಗರಾಜ್.—ಅಗೋ ನೋಡಿ, ಆ ಪ್ರೇಕ್ಷಕರ ಗ್ಯಾಲರಿಯಲ್ಲಿ ಎದ್ದು ಓಡಿ ಹೋಗುತ್ತಿರುವ ವ್ಯಕ್ತಿ ಹೆಸರು ನರಸಿಂಹಮೂರ್ತಿ ಎಂದು. ಅತನ ಜೊತೆಯಲ್ಲಿ ಇನ್ನೂ ಇಬ್ಬರು ಬಂದಿದ್ದಾರೆ. ಅವರೂ ಕೂಡ ಅಲ್ಲಲ್ಲೇ ಪ್ರೇಕ್ಷರ ಗ್ಯಾಲರಿಯಲ್ಲಿ ಕುಳಿತಿದ್ದಾರೆ. .....

ಅಧ್ಯಕ್ಷರು.—ನನ್ನನ್ನು ಏನು ಮಾಡಬೇಕೆಂದು ತಾವು ಹೇಳುತ್ತಿದ್ದೀರಿ ?

Sri K. H. PATIL.—Every opposition member is surrounded by the police. I do not know whether you are sleeping over the matter. I did not know whether the Government have kept them there. It may not be an exaggeration if I say that the Government is planning to murder the opposition people. If the Speaker is not taking care of our lives what is the use ? Your arms are so strong that you can talk against them. Everyday we are surrounded by the police whether we are in the Legislators' Home or anywhere. Even at the Dining Table they are found. If you do not want to give us protection, we will remain in the hotels. This is not fair.

ಶ್ರೀ ವಾಟಾಳ್ ನಾಗರಾಜ್.—ನಾನು ವಿಚಾರವನ್ನು ತಮ್ಮ ಗಮನಕ್ಕೆ ತಂದೆ. ತಕ್ಷಣವೇ ಅಲ್ಲಿದ್ದ ಅವರಿಬ್ಬರೂ ಓಡಿಹೋದರು. ತಾವು ಅವರನ್ನು ಫ್ಯೂಂಡೌಟ್ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಯಾವ ಜನ್ಮಕ್ಕೆ ತಾವು ಅವರನ್ನು ಫ್ಯೂಂಡೌಟ್ ಮಾಡುವುದು ? ನಾನು ಸುದ್ದಿಯನ್ನು ಕೊಟ್ಟ ಕೂಡಲೆ ತಾವು ವಾಚ್ ಅಂಡ್ ವಾರ್ಡಿನವರಿಗೆ ಹೇಳಿ ಅವರನ್ನು ಏಕೆ ಅರೆಸ್ಟ್ ಮಾಡಿಸಲಿಲ್ಲ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇರಲಿ ಬಿಡಿ, ಮುಖ್ಯಮಂತ್ರಿಗಳ ಹಿಂದೆ ಮುಂದೆ ಪೋಲೀಸಿನವರು ಇದ್ದರೆ ಅದೂ ಒಂದು ಮರ್ಯಾದೆ. ನಮಗೂ ಹಾಗೆ ಅದೊಂದು ಮರ್ಯಾದೆ ಇರಲಿ.

Mr. SPEAKER.—What is the member's suggestion ?

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಪೊನ್ನೆ ಯಾರೋ ಪ್ರೇಕ್ಷಕರ ಗ್ಯಾಲರಿಯಲ್ಲಿ ಗಲಾಟೆ ಮಾಡಿದ್ದಕ್ಕೆ ಅಧ್ಯಕ್ಷರು ಅವರನ್ನು ಪೋಲೀಸ್ ಕಸ್ಟಡಿಗೆ ಕಳುಹಿಸಲಿಲ್ಲವೇ ? ಹಾಗೆ ಈ ದಿನಸ ಕೂಡ ಅಲ್ಲಿ ಇದ್ದವರು ಯಾರೆಂಬುದನ್ನು ತಿಳಿಯುವತನಕ ಅವರನ್ನು ಅಧ್ಯಕ್ಷರು ಏಕೆ ಪೋಲೀಸ್ ಕಸ್ಟಡಿಗೆ ಕಳುಹಿಸಬಾರದಾಗಿತ್ತು ?

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರಿಗೆ ಅಷ್ಟಾಗಿ ಪೋಲೀಸಿನವರ ಅನುಭವವಾಗಿಲ್ಲ ಎಂದು ಕಾಣುತ್ತೆ.

ಶ್ರೀ ಕೆ. ಎಚ್. ರಂಗನಾಥ್.—ಐ.ಜಿ.ಪಿ. ಅವರು ತಮ್ಮ ಅಪ್ಪಣೆಪಡೆದು ಇಲ್ಲಿಗೆ ಎಸ್.ಬಿ. ಪೋಲೀಸರನ್ನು ಕಳುಹಿಸಿದ್ದಾರೆಯೇ ಅಥವಾ ಅವರಾಗೇ ಕಳುಹಿಸಿದ್ದಾರೆಯೇ ಅನ್ನುವುದನ್ನು ತಾವು ಸಭೆಗೆ ತಿಳಿಸಬೇಕು. ಇಲ್ಲಿ ಯಾವ ಯಾವ ದಿವಸ ಯಾವ ಯಾವ ಮೆಂಬರುಗಳು ಏನೇನು ಪ್ರಶ್ನೆಗಳನ್ನು ಹಾಕುತ್ತಾರೆ ಯಾರು ಯಾರು ಏನೇನು ಪ್ರಶ್ನೆಗಳನ್ನು ಪಾರ್ಟ್ ನೋಟೀಸ್ ಕ್ವೆಶ್ಚನ್‌ಗಳನ್ನು ಮತ್ತು ಕಾಲಿಂಗ್ ಅಟೆನ್‌ಷನ್ ನೋಟೀಸುಗಳನ್ನು ಕೊಟ್ಟಿದ್ದಾರೆಂಬುದನ್ನೆಲ್ಲಾ ಅವರು ಬರೆದು ಕೊಂಡು ಹೋಗುತ್ತಿದ್ದಾರೆ. ಇಲ್ಲಿ ಪ್ರತಿನಿತ್ಯವೂ ನರಸಿಂಹಮೂರ್ತಿ ಎನ್ನತಕ್ಕವರನ್ನು ನಾನು ನೋಡುತ್ತಿದ್ದೇನೆ. ಆತ ಇಲ್ಲಿ ಪ್ರತಿ ದಿನವೂ ಡ್ಯೂಟಿಯಲ್ಲಿರುತ್ತಾನೆ. ಆತ ಇಲ್ಲಿ ಯಾರ ಅಪ್ಪಣೆ ಪಡೆದು ಬಂದಿದ್ದಾರೆಂಬುದನ್ನು ತಿಳಿಸಬೇಕು. ನಾವೇನು ದೇಶಕ್ಕೆ ಚೈನಾದವರನ್ನು ಕರೆತರುವ ಕೆಲಸ ಮಾಡುವುದಿಲ್ಲ.

Notice under Rule 312 regarding Police Lathi Charge etc., in the Government College Premises

ಶ್ರೀ ಎಚ್. ಸಿದ್ದವೀರಪ್ಪ.—ಅಧ್ಯಕ್ಷರೇ, ನಾನು ರೂಲ್ 312ರ ಪ್ರಕಾರ ಈ ಒಂದು ವಿಷಯವನ್ನು ಎತ್ತಬೇಕೆಂದಿದ್ದೆ. ಆದರೆ ಅಷ್ಟರಲ್ಲೇ ಬೇರೆಯವರು ಪ್ರಶ್ನೆಯನ್ನು ಎತ್ತಿದ್ದಾರೆ. ಈ ವಿಚಾರದಲ್ಲಿ ಚೈಂ ವೇಸ್ಟಾಗಬಾರದು ಅನ್ನುವುದಾಗಿದ್ದರೆ ನಾನು ಕಳುಹಿಸಿರತಕ್ಕ ನೋಟೀಸಿನಲ್ಲೂ ಇದೇ ವಿಚಾರ ಅಡಕವಾಗಿರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಏನಾದರೂ ಹೇಳಿಕೆ ಕೊಡುವುದಿದ್ದರೆ ಅವರು ಅದನ್ನು ಮಾಡಬಹುದು. ಅದರಿಂದ ಚೈಂ ಉಳಿತಾಯವಾಗಬಹುದು.

Mr SPEAKER.—I have admitted the hon. Member's notice and passed it on to the Chief Minister.

Sri H. SIDDAVEERAPPA.—I am raising it now; let him reply later on.

Mr. SPEAKER.—Is the Hon. Chief Minister in a position to reply?

Sri VEERENDRA PATIL (Chief Minister).—The hon. Member wanted to raise certain issues under some clause of the Rules of Procedure. I said that if the Speaker admitted I had no objection. If you have admitted then I must know what he wants me to say. The notice he has sent says that he wants to raise about the police lathi charge and police beating of students in the college.

Mr. SPEAKER.—Is the Hon. Chief Minister in a position to give information?

Sri VEERENDRA PATIL.—I am in a position to appraise the House of the latest position, what happended fro n this morning up till this hour.

† ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮೀ, ಅಧ್ಯಕ್ಷರೇ, ಈ ದಿವಸ ರೆಜಿಸ್ಟ್ರೇಟರ್ಸ್ ಹೋಮ್‌ನಲ್ಲಿ ನಾನು ಮತ್ತು ನಮ್ಮ ಸ್ನೇಹಿತರು ಶ್ರೀಮಾನ್ ದೇವರಾಜ್ ಅರಸ್‌ರವರು ಇತರರು ಇರಬೇಕಾದರೆ ಕೆಲವು ವಿದ್ಯಾರ್ಥಿಗಳು ಕಣ್ಣೀರು ಹಾಕಿಕೊಂಡು ಬಂದು ಈ ದಿನ ಪೋಲೀಸಿನವರು ಈ ರೀತಿ ಹೊಡೆದಿದ್ದಾರೆ ಎಂದು ತೋರಿಸಿದರು. ಒಬ್ಬ ಪಾಲಿಟೆಕ್ನಿಕ್ ಹುಡುಗ ಹೊಜೇರಿಯಿಂದ ಕಾಫಿ ಕುಡಿದುಕೊಂಡು ಬರುವಾಗ ಅವನನ್ನು ಓಡಿಸಿಕೊಂಡು ಹೋಗಿ ಏಟು ಹೊಡೆದಿದ್ದನ್ನು ತೋರಿಸಿದ. ಇನ್ನೊಬ್ಬನ ತಲೆಗೆ ಗಾಯವಾಗಿದೆ. ಅಮೇಲೆ ಬಂದ ವರ್ತಮಾನದ ಪ್ರಕಾರ ಒಬ್ಬ ಉಪಾಧ್ಯಾಯರಿಗೂ ಕೂಡ ಏಟು ಬಿದ್ದಿದೆ ಎಂದು ಕೇಳಿದೆ. ಅಮೇಲೆ ನಾನು ಪೋಲೀಸ್ ಕಮೀ